# ಮಕ್ಕಳೊಂದಿಗೆ ಮಕ್ಕಳಾಗಿ!

**ಈಗಿನ ಮಕ್ಕಳ ಜಗತ್ತಿನಲ್ಲಿ ಜಾಗ ಸಿಗಬೇಕೆಂದರೆ, ಮಕ್ಕಳ ಜೊತೆಜೊತೆಗೆ ತಂದೆತಾಯಿಗಳು ಕಾಲಕ್ಕೆ ತಕ್ಕಂತೆ ಅಪ್‌ಡೇಟ್ ಆಗುವುದು ಮುಖ್ಯ.**

■ ಶ್ರೀರಂಜನಿ ಅಡಿಗ

'ಮಕ್ಕಳೊಂದಿಗೆ ಮಕ್ಕಳಾಗಿ' ಎಂಬ ಮಾತಿದೆ. ದೊಡ್ಡವರು ನಾವು ಹಮ್ಮುಬಿಮ್ಮುಗಳನ್ನು ಬದಿಗಿಟ್ಟು ಅವರೊಂದಿಗೆ ಆಟವಾಡುತ್ತಾ ಸ್ವಲ್ಪ ಹೊತ್ತು ಕಳೆದರೆ ನಮಗೂ ಬಾಲ್ಯ ಮರಳುತ್ತದೆ, ಅವರಿಗೂ ಬಲವಾದ ಭಾವನಾತ್ಮಕ ಸಂಬಂಧ ನಮ್ಮೊಂದಿಗೆ ಬೆಸೆಯುತ್ತದೆ ಎಂಬುದು ಬಲ್ಲೆವು. ಈ ಮಾತು ಎಲ್ಲ ಕಾಲಕ್ಕೂ ಸರಿ. ಆದರೆ ಅದರೊಂದಿಗೆ ಕೊಂಚ ಬದಲಾವಣೆಯಿದೆ. ಅದೂ ಈಗಿನ 'ಜೆನ್ ಝೀ' ಮಕ್ಕಳೊಂದಿಗೆ ಕಾಲ ಕಳೆಯಬೇಕೆಂದರೆ ನಮಗೆ ಎಷ್ಟು ತಿಳಿದಿದ್ದರೂ ಸಾಲದು.



ಹೌದು ಮತ್ತೆ! ಈಗಿನ ಮಕ್ಕಳು ಹುಟ್ಟುತ್ತಲೇ ಮೊಬೈಲ್ ಬಳಸುವವರು. ಮೀಮುಗಳಿಗೂ, ರೀಲ್ಸುಗಳಿಗೂ ಪ್ರತೀದಿನ ಅಪ್‌ಡೇಟ್ ಆಗುವವರು. 'ಮೋಯೇ ಮೋಯೇ' ಹಾಡಿಂದ ಹಿಡಿದು ಇವತ್ತಿನ ಟ್ರೆಂಡಿಂಗ್ ಹೀರಾಮಂಡಿಯ ಸ್ವಾನ್ ವಾಕ್‌ವರೆಗೂ ಅವರಿಗೆ ಗೊತ್ತು. ಮದುವೆ ರಿಸೆಪ್ಷನ್‌ಗಳಲ್ಲಿ, ಗೆಟ್ ಟುಗೆದರ್‌ಗಳಲ್ಲಿ ಹಾಕುವ ಹಾಡುಗಳೆಲ್ಲ ನಾಲಗೆಯಲ್ಲಿ ಲೀಲಾಜಾಲವಾಗಿ ನಲಿದಾಡುತ್ತಿರುತ್ತವೆ, ಆ ಹಾಡುಗಳು ಪ್ಲೇ ಆಗುತ್ತಲೇ ಸಿಗ್ನೇಚರ್ ಸ್ಟೆಪ್ಪುಗಳಿಗೆ ಕೈಕಾಲುಗಳು ಹೆಜ್ಜೆ ಹಾಕಲಾರಂಭಿಸುತ್ತವೆ. ಇಂಥ ಕಾರ್ಯಕ್ರಮಗಳಿಗೆ ಟ್ರೆಂಡಿಂಗ್ ರೀಲ್ಸುಗಳ ರಿಕ್ರಿಯೇಶನ್‌ಗಳನ್ನು ನೋಡಿ ಎಲ್ಲರೂ ಹೋಹೋ, ಹ್ಹೀಹ್ಹೀ ಎಂದು ಕೇಕೆ ಹಾಕುತ್ತಿದ್ದರೆ, ನಾನು ಮಾತ್ರ ಪಿಳಿಪಿಳಿ ಕಣ್ಣು ಬಿಡುತ್ತ ನೋಡುತ್ತಿದ್ದುದು ಅದೆಷ್ಟೋ ಬಾರಿ. ಅವರ ಪಾಲಿಗೆ ನಾನೊಬ್ಬಳು ಶಿಲಾಯುಗದ ಪಳೆಯುಳಿಕೆಯಂತೆ ಕಂಡುಬಂದಿದ್ದರೆ ಅಚ್ಚರಿಯಿಲ್ಲ.

ನನ್ನ ಸ್ಕ್ರೀನ್‌ಟೈಮ್ ಅತ್ಯಂತ ಕಡಿಮೆ, ಸುಮ್ಮನೆ ವಿಡಿಯೊಗಳನ್ನು ನೋಡುತ್ತ ಸಮಯ ಹಾಳು ಮಾಡಿಕೊಳ್ಳುವುದಿಲ್ಲ ಎಂಬ ನನ್ನ ಒಣಹೆಮ್ಮೆಯೆಲ್ಲ ನಿಧಾನಕ್ಕೆ ಚಿಂದಿಯಾಗುತ್ತಿದೆ. ನಿಜಕ್ಕೂ ನನ್ನ ಪರಿಸ್ಥಿತಿ ಮೋಯೇ ಮೋಯೇಗಿಂತ ಬೇರೆಯಾಗಿರಲಿಲ್ಲ.

ಇಂಥ ಕಾರ್ಯಕ್ರಮಗಳಲ್ಲಿ ಅಥವಾ ಯುವಜನರೊಂದಿಗೆ ನೀವಿರುವ ಸಂದರ್ಭವಾಗಿದ್ದಲ್ಲಿ ನಿಮಗೆ ಕನ್ನಡ, ಹಿಂದಿ ಹಾಡುಗಳ ಜೊತೆಗೆ ತಮಿಳು, ತೆಲುಗು, ಮಲಯಾಳಿ, ಕೊರಿಯನ್, ಶ್ರೀಲಂಕನ್ ಹಾಡುಗಳು (ಅರ್ಥ ಗೊತ್ತಿಲ್ಲದಿದ್ದರೂ) ಗೊತ್ತಿದೆ ಎಂದಾದರೆ ನಿಮಗೆ ಆ್ಯಡೆಡ್ ಅಡ್ವಾಂಟೇಜ್. ಇನ್ನು ಟ್ರೆಂಡಿಂಗ್ ಹಾಡುಗಳು ಗೊತ್ತಿದೆಯೆಂದಾದಲ್ಲಿ ಪ್ರವಾಸದ ಸಮಯದಲ್ಲಿ ಎಫ್‌ಎಂಗಳಲ್ಲಿ ಪ್ರಸಾರವಾಗುವ ಹಾಡುಗಳನ್ನು ಆಸ್ವಾದಿಸಬಹುದು.

ಕ್ರಿಕೆಟ್ಟಿನ ವಿಷಯಕ್ಕೆ ಬಂದರೆ, ನಿಮಗೆ ಆಸಕ್ತಿ ಇರಲಿ, ಬಿಡಲಿ ಐಪಿಎಲ್ ಬಗ್ಗೆ ಒಂಚೂರಾದರೂ ನಾಲೆಜ್ ಇದ್ದರೆ ಒಳಿತು. ಕೊಹ್ಲಿ, ಗೇಲ್ ಬಿಟ್ಟು ಹೊಸಬರು ಇದ್ದರೆ ಅವರ ಮುಖಪರಿಚಯ ಇಲ್ಲದಿದ್ದರೂ ತೊಂದರೆಯಿಲ್ಲ, ಹೆಸರಾದರೂ ತಿಳಿದಿರಲಿ. ಆರೆಂಜ್ ಕ್ಯಾಪ್, ಪರ್ಪಲ್ ಕ್ಯಾಪ್‌ಗಳಂಥ ಬಣ್ಣಬಣ್ಣದ ಟೋಪಿಗಳಿವೆ ಎಂಬುದನ್ನಾದರೂ ಅರಿತಿರಿ. (ಅರ್ಥ ತಿಳಿಯದಿದ್ದರೂ ತಲೆಬಿಸಿ ಬೇಡ!) ಆಗ ಮಕ್ಕಳು ನಿಮಗೂ ಕ್ರಿಕೆಟ್ಟಿನ ಬಗ್ಗೆ ಗೊತ್ತು ಎಂದು ನಿಮ್ಮನ್ನು ಗುಂಪಿನೊಳಗೆ ಸೇರಿಸಿಕೊಳ್ಳುತ್ತಾರೆ, ಇಲ್ಲದಿದ್ದರೆ ನೀವು ಗುಂಪಲ್ಲಿ ಗೋವಿಂದನೂ ಆಗುವುದಿಲ್ಲ.

ಈಗಿನ ಕಾಲದಲ್ಲಿ ಬರೀ ಪ್ರಚಲಿತ ವಿದ್ಯಮಾನಗಳನ್ನು ನ್ಯೂಸ್ ಪೇಪರ್ ಓದಿ ಅಥವಾ ಗೂಗಲ್ ನ್ಯೂಸಿನಿಂದ ಅರಿತಿದ್ದರೆ ಸಾಲದು. ಅವುಗಳ ಜೊತೆಗೆ ಪ್ರಸಿದ್ಧ ವ್ಲಾಗರುಗಳು, ಯೂಟ್ಯೂಬರ್, ಇನ್‌ಫ್ಲುಯೆನ್ಸರ್‌ಗಳ ಹೆಸರನ್ನೂ ತಿಳಿದಿರಿ. ಕಾವೇರಿ ನದಿ ಹರಿಯುವ ಚಾನೆಲ್‌ಗಳಲ್ಲಿ ನೀರು ಇದೆಯೋ ಇಲ್ಲವೋ ತಿಳಿದಿಲ್ಲದೇ ಇರಬಹುದು. ಆದರೆ ಫೇಮಸ್ ಯೂಟ್ಯೂಬ್ ಚಾನಲ್‌ಗಳ ಬಗ್ಗೆ ಸ್ವಲ್ಪವಾದರೂ ತಿಳಿದಿದ್ದರೆ ನಿಮಗೊಂದು ಮರ್ಯಾದೆ.

ಮುಂಚೆಯೆಲ್ಲ ಟೆಲಿಗ್ರಾಮು ಕಳುಹಿಸುವಾಗ ಎಷ್ಟು ಸಣ್ಣದಾಗಿ ಬರೆಯಲು ಸಾಧ್ಯವೋ ಅಷ್ಟು ಸಣ್ಣದಾಗಿ ಬರೆಯುತ್ತಿದ್ದರು. ನಂತರ SMSಗಳು ಬಂದವು. ಈಗಂತೂ ಅದನ್ನು ಊಹಿಸಲೂ ಸಾಧ್ಯವಿಲ್ಲದ ರೀತಿ 'ಜೆನ್ ಝೀ' ಜನತೆ ಬಳಸುತ್ತಿದೆ. ಅವರು ಬಳಸುವ ಶಾರ್ಟ್ ಫಾರ್ಮುಗಳು ದೇವರಿಗೇ ಪ್ರೀತಿ.

IG, IDH, IKR, UK, WYD, IDK ಮುಂತಾದ ಪದಗಳು; GOAT, STAN, DANK, CAPಗಳಂಥ ಸ್ಲಾಂಗ್ ಪದಗಳನ್ನು ನಮ್ಮಂಥ ಮಿಲೇನಿಯಲ್‌ಗಳು ಓದಿದರೆ ನಮ್ಮ ಮಕ್ಕಳು ಯಾವುದಾದರೂ ನಿಷೇಧಿತ ಸಂಸ್ಥೆಯ ಏಜೆಂಟರಾಗಿದ್ದಾರೇನೋ ಎಂಬ ಆತಂಕ ಮೂಡಿದರೂ ಆಶ್ಚರ್ಯವಿಲ್ಲ. ಹೀಗಾಗಿ ನಾವೇ ಇಂಥ ಕೆಲವು ಪದಗಳ ಅರ್ಥ ತಿಳಿದು ಅಪ್‌ಗ್ರೇಡ್ ಆಗಿದ್ದರೆ ತಲೆ ಕೆರೆದುಕೊಳ್ಳಬೇಕಾಗಿಲ್ಲ.

ಈ ಕಾಲದಲ್ಲಿ ನಮಗೆಲ್ಲ ಗೊತ್ತು ಎಂದು ನಾವು ದೊಡ್ಡವರು ತಿಳಿದಿದ್ದರೆ ಅದಕ್ಕಿಂತ ಹೆಡ್ಡುತನ ಬೇರೊಂದಿಲ್ಲ. ಚಿಕ್ಕಮಕ್ಕಳೆಂದು ಅವರನ್ನು ನಾವು ಸಸಾರವಾಗಿ ಕಾಣುವಂತಿಲ್ಲ. ಮಕ್ಕಳು ಇಂಥ ವಿಷಯದಲ್ಲಿ ನಮಗಿಂತ ಎರಡು ಹೆಜ್ಜೆ ಮುಂದಿರುತ್ತಾರೆ. 'ಕಾಲಕ್ಕೆ ತಕ್ಕಂತೆ ಕೋಲ' ಅನ್ನುತ್ತಾರಲ್ಲ ಹಾಗೆ ನಾವೂ ಅವರೊಂದಿಗೆ ಅಪ್‌ಡೇಟ್ ಆಗುತ್ತಾ ಹೋದರೆ ಮಾತ್ರ ಅವರೊಂದಿಗೆ ಬದುಕಬಹುದು. ಆಗ ನಮಗೂ ಅವರ ಜಗತ್ತಿನಲ್ಲಿ ಒಂಚೂರು ಜಾಗ. ಏನಂತೀರಿ?

ಪ್ರತಿಕ್ರಿಯಿಸಿ: feedback@sudha.co.in